ಫ್ಯಾಕ್ಸ್ : 080 – 2202 8041 ದೂರವಾಣಿ : 080 – 2202 8032

# ಕರ್ನಾಟಕ ಸರ್ಕಾರ

## ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ

ವಾರ್ತಾ ಸೌಧ, ಸಂಖ್ಯೆ 17, ಭಗವಾನ್ ಮಹಾವೀರ ರಸ್ತೆ, ಬೆಂಗಳೂರು – 560 001.

ಸಂಖ್ಯೆ : ವಾಸಾಸಂಇ : ಉ ನಿ : ಸುಮಪ : 2014–15 : ದಿನಾಂಕ: 20–11–2014

## ಪತ್ರಿಕಾ ಆಮಂತ್ರಣ

| ಕ್ರಮ ಸಂಖ್ಯೆ | ಕಾರ್ಯಕ್ರಮಗಳ ವಿವರ | ದಿನಾಂಕ ಸಮಯ | ಕಾರ್ಯಕ್ರಮ ನಡೆಯುವ ಸ್ಥಳ |
|---|---|---|---|
| 1 | **Institute of Wood Science and Technology (IWST) International Conference on "Wood is Good: Current Trends and Future Prospects in Wood Utilization"**<br><br>**Chief Guest:**<br><br>**Sri H.N. Ananth Kumar, Minister for Chemical and Fertilizers, Government of India**<br><br>**Presided by:**<br><br>**Dr. Ashwani Kumar, IFS., Director General ICFRE**<br><br>**Shri G.V. Sugur IFS., Principal Chief Conservator of Forests and Head of Forest Force Government of Karnataka**<br><br>**Note:**<br>**Vehicle Arrangement has been made from Vartha Soudha, Bangalore at 9-00 A.M.** | **21-11-2014 Friday at 9-30 A,M** | **JN Tata Auditorium, IISc., Bangalore** |

| | | | |
|---|---|---|---|
| | **Contact: Dr. Ashuthosh 7760083115** | | |
| 2 | ಅತ್ಯಾಚಾರ ಪ್ರಕರಣಗಳಿಗೆ ಸಂಬಂಧಿಸಿದಂತೆ ರಚಿಸಲಾಗಿರುವ ತಜ್ಞರ ಸಮಿತಿಯ ಮಹಿಳಾ ಸದಸ್ಯರನ್ನೊಳಗೊಂಡ ಉಪ ಸಮಿತಿಯ ಸಭೆ.<br><br><u>ಅಧ್ಯಕ್ಷತೆ:</u><br><br>ಶ್ರೀ ಕೆ.ಬಿ. ಶಾಣಪ್ಪ,<br>ಅಧ್ಯಕ್ಷರು,<br>ಶಾಸಕರ ಉಪ ಸಮಿತಿ. | 21-11-2004<br>ಶುಕ್ರವಾರ<br>ಬೆಳಗ್ಗೆ<br>11-00 ಗಂಟೆಗೆ | ಕೊಠಡಿ ಸಂಖ್ಯೆ 338,<br>ಅಧ್ಯಕ್ಷರ ಕೊಠಡಿ,<br>3ನೇ ಮಹಡಿ, ವಿಧಾನಸೌಧ<br>ಬೆಂಗಳೂರು. |
| 3 | ಲಲಿತಕಲಾ ಅಕಾಡೆಮಿ ಗೌರವ ಪ್ರಶಸ್ತಿ ಹಾಗೂ ಕಲಾ ಬಹುಮಾನ ಸಮಾರಂಭ ಕುರಿತು ಪತ್ರಿಕಾಗೋಷ್ಠಿ:<br><br>ಡಾ. ಎಂ.ಎಸ್. ಮೂರ್ತಿ,<br>ಅಧ್ಯಕ್ಷರು,<br>ಕರ್ನಾಟಕ ಲಲಿತಕಲಾ ಅಕಾಡೆಮಿ<br>ಬೆಂಗಳೂರು | 21-11-2004<br>ಶುಕ್ರವಾರ<br>ಬೆಳಗ್ಗೆ<br>11-00 ಗಂಟೆಗೆ | ಕರ್ನಾಟಕ ಲಲಿತಕಲಾ<br>ಅಕಾಡೆಮಿ ಕಚೇರಿ,<br>ಕನ್ನಡ ಭವನ, ಎರಡನೇ<br>ಮಹಡಿ, ಜೆ.ಸಿ. ರಸ್ತೆ,<br>ಬೆಂಗಳೂರು – 560 002. |
| 4 | <u>ಕೃಷಿ ಮೇಳ – 2014</u>:<br><br><u>ಪ್ರಶಸ್ತಿ ಪ್ರದಾನ ಸಮಾರಂಭ:</u><br><br>ಶ್ರೀ ಅನಂತಕುಮಾರ್,<br>ಕೇಂದ್ರ ರಾಸಾಯನಿಕ ಮತ್ತು ರಸಗೊಬ್ಬರ ಖಾತೆ ಸಚಿವರು,<br><br><u>ಮುಖ್ಯ ಅತಿಥಿಗಳು:</u><br><br>ಶ್ರೀಮತಿ ಉಮಾಶ್ರೀ,<br>ಕನ್ನಡ ಮತ್ತು ಸಂಸ್ಕೃತಿ ಹಾಗೂ ಮಹಿಳಾ ಮತ್ತು ಮಕ್ಕಳ ಅಬಿವೃದ್ಧಿ ಖಾತೆ ಸಚಿವರು.<br><br>ವಿ.ಸೂ: ಬೆಂಗಳೂರು ಕಬ್ಬನ್ ಉದ್ಯಾನವನದ ಪ್ರೆಸ್ ಕ್ಲಬ್ ಆವರಣದಿಂದ ಬೆಳಗ್ಗೆ 10.15 ಗಂಟೆಗೆ ಕೃಷಿ ವಿಶ್ವ ವಿದ್ಯಾನಿಲಯದ ವಾಹನ ವ್ಯವಸ್ಥೆ ಮಾಡಲಾಗಿದೆ.<br><br><u>ಸಂಪರ್ಕ</u>:<br><br>ಡಾ ಎಲ್. ರಾಮಕೃಷ್ಣ ರಾವ್, | 21-11-2014<br>ಶುಕ್ರವಾರ<br>ಬೆಳಗ್ಗೆ<br>11-00 ಗಂಟೆಗೆ | ಕೃಷಿ ಮೇಳ ಆವರಣ,<br>ಗಾಂಧಿ ಕೃಷಿ ವಿಜ್ಞಾನ ಕೇಂದ್ರ<br>(ಜಿ.ಕೆ.ವಿಕೆ.)<br>ಬೆಂಗಳೂರು, |

| | | | |
|---|---|---|---|
| | ಮೊ. ನಂ. 9986663132<br><br>ಶ್ರೀ ಅಶೋಕ್<br>ಮೊ. ಸಂ. 9886690866 | | |
| 5 | "ಸಮುದಾಯ ರೇಡಿಯೋ ನಿರ್ಮಾಣ ಮತ್ತು ನಿರ್ವಹಣೆ" ಕೃತಿಯ ಲೋಕಾರ್ಪಣೆ:<br>ಮುಖ್ಯ ಅತಿಥಿಗಳು:<br>ಡಾ: ಶಾಲಿನಿ ರಜನೀಶ್,<br>ಪ್ರಧಾನ ಕಾರ್ಯದರ್ಶಿ<br>ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ<br><br>ಶ್ರೀ ಎನ್.ಆರ್. ವಿಶುಕುಮಾರ್,<br>ನಿರ್ದೇಶಕರು, ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ<br><br>ಶ್ರೀ ಆರ್. ನರಸಿಂಹಸ್ವಾಮಿ<br>ಪ್ರಧಾನ ವ್ಯವಸ್ಥಾಪಕರು, ಬೆಸಿಲ್<br><br>ಶ್ರೀ ಅಬ್ದುಲ್ ರೆಹಮಾನ್ ಪಾಷ | 21-11-2014<br>ಶುಕ್ರವಾರ<br>ಮಧ್ಯಾಹ್ನ<br>12-30 ಗಂಟೆಗೆ | ಸಭಾಂಗಣ,<br>ವಾರ್ತಾ ಸೌಧ,<br>ಭಗವಾನ್ ಮಹಾವೀರ ರಸ್ತೆ,<br>ಬೆಂಗಳೂರು |
| 6 | <u>ಕೃಷಿ ಮೇಳ - 2014</u>:<br><br><u>ಸಮಾರೋಪ ಸಮಾರಂಭ</u><br><br><u>ಮುಖ್ಯ ಅತಿಥಿಗಳು:</u><br><br>ಶ್ರೀ ಟಿ. ಬಿ ಜಯಚಂದ್ರ,<br>ಕಾನೂನು ಮತ್ತು ಪಶುಸಂಗೊಪನಾ ಖಾತೆ ಸಚಿವರು.<br><br>ಶ್ರೀ ಅಭಯಚಂದ್ರ<br>ಯುವಜನ ಸಬಲೀಕರಣ ಮತ್ತು ಮೀನುಗಾರಿಕಾ ಖಾತೆ ಸಚಿವರು<br><br><u>ಅಧ್ಯಕ್ಷತೆ:</u><br><br>ಶ್ರೀ ಕೃಷ್ಣಬೈರೇಗೌಡ,<br>ಕೃಷಿ ಸಚಿವರು.<br><br>ವಿ.ಸೂ: ಬೆಂಗಳೂರು ಕಬ್ಬನ್ ಉದ್ಯಾನವನದ ಪ್ರೆಸ್ ಕ್ಲಬ್ ಆವರಣದಿಂದ ಮಧ್ಯಾಹ್ನ 3-00 | 21-11-2014<br>ಶುಕ್ರವಾರ<br>ಸಂಜೆ<br>4-00 ಗಂಟೆಗೆ | ಕೃಷಿ ಮೇಳ ಆವರಣ<br>ಗಾಂಧಿ ಕೃಷಿ ವಿಜ್ಞಾನ ಕೇಂದ್ರ<br>(ಜಿ.ಕೆ.ವಿಕೆ.)<br>ಬೆಂಗಳೂರು, |

| | | | |
|---|---|---|---|
| | ಗಂಟೆಗೆ ಕೃಷಿ ವಿಶ್ವ ವಿದ್ಯಾನಿಲಯ ವಾಹನ ವ್ಯವಸ್ಥೆ ಮಾಡಲಾಗಿದೆ.<br>ಸಂಪರ್ಕ:<br><br>ಡಾ ಎಲ್. ರಾಮಕೃಷ್ಣ ರಾವ್,<br>ಮೊ. ನಂ. 9986663132<br><br>ಶ್ರೀ ಅಶೋಕ್<br>ಮೊ. ಸಂ. 9886690866 | | |

ನಿರ್ದೇಶಕರ ಪರವಾಗಿ

# ಪತ್ರಿಕಾ ಪ್ರಕಟಣೆ

## ಕೆಎಸ್ಎಸ್ಐಡಿಸಿ ಯಿಂದ ಮುಖ್ಯಮಂತ್ರಿಗಳಿಗೆ ಲಾಭಾಂಶ ಸಲ್ಲಿಕೆ

ಬೆಂಗಳೂರು, 20 ನೇ ನವೆಂಬರ್ (ಕರ್ನಾಟಕ ವಾರ್ತೆ)

ಕರ್ನಾಟಕ ರಾಜ್ಯ ಸಣ್ಣ ಕೈಗಾರಿಕೆಗಳ ಅಭಿವೃದ್ಧಿ ನಿಗಮವು 2013-14 ನೇ ಆರ್ಥಿಕ ವರ್ಷದಲ್ಲಿ 11.26 ಕೋಟಿ ರೂ.ಗಳ ಲಾಭ ದಾಖಲಿಸಿದೆ. ಈ ವರ್ಷ ಶೇರುದಾರರಿಗೆ ಶೇ. 10 ರಂತೆ ಲಾಭಾಂಶ ನೀಡಲು ಕಂಪನಿ ನಿರ್ಧರಿಸಿದೆ. ಅದರಂತೆ ಇಂದು ಮುಖ್ಯಮಂತ್ರಿ ಶ್ರೀ ಸಿದ್ದರಾಮಯ್ಯನವರಿಗೆ ಕಂಪನಿ ವತಿಯಿಂದ 2,59,23,600 ರೂ.ಗಳ ಚೆಕ್ಕನ್ನು ಹಸ್ತಾಂತರಿಸಲಾಯಿತು. ಅಲ್ಲದೆ ಇದೇ ಸಂದರ್ಭದಲ್ಲಿ ಮುಖ್ಯಮಂತ್ರಿಗಳ ಪರಿಹಾರ ನಿಧಿಗೆ ಕಂಪನಿಯ ಪರವಾಗಿ 40 ಲಕ್ಷ ರೂ.ಗಳ ದೇಣಿಗೆ ನೀಡಲಾಯಿತು ಎಂದು ಸಂಸ್ಥೆಯ ವ್ಯವಸ್ಥಾಪಕ ನಿರ್ದೇಶಕರು ತಿಳಿಸಿದ್ದಾರೆ.

ಈ ಸಂದರ್ಭದಲ್ಲಿ ವಾಣಿಜ್ಯ ಮತ್ತು ಕೈಗಾರಿಕಾ ಇಲಾಖೆಯ ಅಪರ ಮುಖ್ಯ ಕಾರ್ಯದರ್ಶಿ ಶ್ರೀಮತಿ ರತ್ನಪ್ರಭಾ, ಕೈಗಾರಿಕಾ ಮತ್ತು ವಾಣಿಜ್ಯ ಇಲಾಖೆಯ ಆಯುಕ್ತ ಶ್ರೀ ಗೌರವಗುಪ್ತಾ, ಕರ್ನಾಟಕ ರಾಜ್ಯ ಸಣ್ಣ ಕೈಗಾರಿಕೆಗಳ ಅಭಿವೃದ್ಧಿ ನಿಗಮ ವ್ಯವಸ್ಥಾಪಕ ನಿರ್ದೇಶಕ ಶ್ರೀ ವಿ. ಶ್ರೀರಾಮರೆಡ್ಡಿ ಉಪಸ್ಥಿತರಿದ್ದರು ( ಸಂಬಂಧಿಸಿದ ಛಾಯಾ ಚಿತ್ರವನ್ನು ಲಗತ್ತಿಸಿದೆ. )

ಸಮ/ಬಾಬು/ಕೆಎಂ

## ಆಟೋ ಮೀಟರ್ ತಪಾಸಣೆ

**ಬೆಂಗಳೂರು, 20 ನೇ ನವೆಂಬರ್ (ಕರ್ನಾಟಕ ವಾರ್ತೆ)**

**ಕಾನೂನು ಮಾಪನಶಾಸ್ತ್ರ ಇಲಾಖೆಯ ಆಟೋ ಮತ್ತು ಟ್ಯಾಕ್ಸಿ ಘಟಕದವರು ದಿನಾಂಕ 18-11-2014 ರಂದು ಬೆಂಗಳೂರು ನಗರದ ಯಶವಂತಪುರ ರೈಲ್ವೆ ಸ್ಟೇಷನ್ ಸುತ್ತಮುತ್ತ ಅನಿರೀಕ್ಷಿತ ತಪಾಸಣೆಗಳನ್ನು ಕೈಗೊಂಡು 493 ಆಟೋದರ ಮೀಟರ್‌ಗಳ ತಪಾಸಣೆಯನ್ನು ನಡೆಸಿ, 62 ಆಟೋ ಮಾಲೀಕರ/ಚಾಲಕರ ವಿರುದ್ಧ ಮೊಕದ್ದಮೆಗಳನ್ನು ದಾಖಲಿಸಿ ನಿಯಮಾನುಸಾರ ಕ್ರಮ ಜರುಗಿಸಲಾಗುತ್ತಿದೆ. ಟ್ಯಾಂಪರಿಂಗ್ ಆದ ಒಂದು ಆಟೋ ಮೀಟರ್‌ಗೆ ಸಂಬಂಧಿಸಿದಂತೆ ಪ್ರಕರಣವನ್ನು ಯಶವಂತಪುರ ಟ್ರಾಫಿಕ್ ಪೊಲೀಸ್ ಠಾಣೆಗೆ ಮುಂದಿನ ತನಿಖೆಗಾಗಿ ವರ್ಗಾಯಿಸಲಾಗಿದೆ.**

**ಸಾರ್ವಜನಿಕರು ಮೀಟರ್‌ನಲ್ಲಿ ವಂಚನೆ ಮಾಡುವ ಪ್ರಕರಣಗಳನ್ನು ಗಮನಿಸಿದಲ್ಲಿ, ಈ ಇಲಾಖೆಗೆ ದೂರುಗಳನ್ನು ದೂರವಾಣಿ ಸಂಖ್ಯೆ: 080-22342380/22260554/2220750 ಹಾಗೂ ಇ-ಮೇಲ್ clm-lm-ka@nic.in ಮುಖಾಂತರ ನೀಡಬಹುದಾಗಿದೆ.**

ಸಮ:ಬಾಬು:ಜಿಪಿಆರ್.

## ರಸ್ತೆ ಸಂಚಾರ ಬದಲು

**ಬೆಂಗಳೂರು, 20 ನೇ ನವೆಂಬರ್ (ಕರ್ನಾಟಕ ವಾರ್ತೆ)**

**ಚಾಮರಾಜನಗರ ಜಿಲ್ಲೆ ಕೊಳ್ಳೇಗಾಲ ತಾಲ್ಲೂಕಿನ, ಸತ್ತೇಗಾಲದ ಸಮೀಪದಲ್ಲಿರುವ ರಾಷ್ಟ್ರೀಯ ಹೆದ್ದಾರಿ 209 ದಿಂಡಿಗಲ್ - ಬೆಂಗಳೂರು ಶಾಖೆಯ ಕಿ.ಮೀ 356.150 ರಲ್ಲಿನ ಕಾವೇರಿ ನದಿಗೆ ಅಡ್ಡಲಾಗಿ ನಿರ್ಮಿಸಿರುವ ಸೇತುವೆಯ ಮೇಲೆ ಎಲ್ಲಾ ವಾಹನಗಳ ಸಂಚಾರವನ್ನು ದಿನಾಂಕ 20-11-2014 ರಿಂದ 19-05-2015 ರವರೆಗೆ ಸಂಪೂರ್ಣವಾಗಿ ನಿಷೇಧಿಸಲಾಗಿದೆ.**

**ಪರ್ಯಾಯವಾಗಿ ಮಳವಳ್ಳಿಯಿಂದ ಕೊಳ್ಳೇಗಾಲ ತಲುಪಲು ಬದಲಿ ಮಾರ್ಗವಾದ ರಾವಣಿ-ಬುವಳ್ಳಿ-ಪೂರಿಗಾಲಿ-ಮಡುಕುತೊರೆ-ತಲಕಾಡು-ಮಾದಪುರ-ಮುಳ್ಳೂರು-ಕೊಳ್ಳೇಗಾಲ ಹಾಗೂ ಕೊಳ್ಳೇಗಾಲದಿಂದ ಮಳವಳ್ಳಿಗೆ ತಲುಪಲು ಮುಳ್ಳೂರು, ಕಲ್ಲೂರು ಮಾದಪುರ ರಸ್ತೆಯಲ್ಲಿ ಚಲಿಸಿ ಹೆಮ್ಮಿಗೆ ಸೇತುವೆ ಮುಖಾಂತರ ಕಾವೇರಿಪುರ ಮೇದನಿ ಮಡವಾಡಿ ಬೆಳಕವಾಡಿ ತಲುಪಿ ರಾ.ಹೆ -209 ರ ಸರಪಳಿ 356.150 ರಲ್ಲಿ ಸೇರುವಂತೆ ಪ್ರಕಟಣೆಯಲ್ಲಿ ಕೋರಲಾಗಿದೆ.**

ಸಮ:ಬಾಬು:ಜಿಪಿಆರ್._

## ಬೆಳಗಾವಿಯಲ್ಲಿ ವಿಧಾನಸಭೆ ಅಧಿವೇಶನ

**ಬೆಂಗಳೂರು, 20 ನೇ ನವೆಂಬರ್ (ಕರ್ನಾಟಕ ವಾರ್ತೆ)**

ಕರ್ನಾಟಕ ವಿಧಾನಸಭೆಯ 5ನೇ ಅಧಿವೇಶನವು ಬೆಳಗಾವಿ ಸುವರ್ಣ ವಿಧಾನಸೌಧದಲ್ಲಿರುವ ವಿಧಾನಸಭೆಯ ಸಭಾಂಗಣದಲ್ಲಿ ಡಿಸೆಂಬರ್ 9 ರಂದು ಬೆಳಿಗ್ಗೆ 11–00 ಗಂಟೆಗೆ ಸಮಾವೇಶಗೊಳ್ಳಲಿದೆ.

ಕರ್ನಾಟಕ ವಿಧಾನಸಭೆಯು ಡಿಸೆಂಬರ್ 9 ರಿಂದ ಡಿಸೆಂಬರ್ 20 ರವರೆಗೆ ನಡೆಯಲಿದ್ದು, ಡಿಸೆಂಬರ್ 13 ಮತ್ತು 14 ರಂದು ಅಧಿವೇಶನಕ್ಕೆ ರಜಾ ದಿನವಾಗಿರುತ್ತದೆ ಎಂದು ವಿಧಾನ ಸಭೆ ಸಚಿವಾಲಯದ ಪ್ರಕಟಣೆ ತಿಳಿಸಿದೆ.

ಸಮ:ಬಾಬು:ಜಿಪಿಆರ್.

## ಆನ್‌ಲೈನ್‌ನಲ್ಲಿ ಗುತ್ತಿಗೆದಾರರ ನೋಂದಣಿ ಮತ್ತು ನವೀಕರಣಕ್ಕೆ ಚಾಲನೆ

ಬೆಂಗಳೂರು, ನ. 20 (ಕರ್ನಾಟಕ ವಾರ್ತೆ)–

**ಲೋಕೋಪಯೋಗಿ ಇಲಾಖೆಯಲ್ಲಿನ ಗುತ್ತಿಗೆದಾರರ ನೋಂದಣಿ ಮತ್ತು ನವೀಕರಣ ಆನ್‌ಲೈನ್ ಯೋಜನೆಗೆ ಲೋಕೋಪಯೋಗಿ ಸಚಿವ ಡಾ. ಎಚ್. ಸಿ. ಮಹದೇವಪ್ಪ ಅವರು ಇಂದು ಚಾಲನೆ ನೀಡಿದರು.**

**ಗುತ್ತಿಗೆದಾರರ ನೋಂದಣಿಯನ್ನು 1987 ರಿಂದ ಪ್ರಾರಂಭಿಸಿ, 5 ವರ್ಷದ ಬ್ಲಾಕ್ ಅವಧಿಗೆ ನವೀಕರಿಸಬೇಕಾಗಿತ್ತು. 1 ಮತ್ತು 2ನೇ ದರ್ಜೆ ಗುತ್ತಿಗೆದಾರರಿಗೆ ಈ ಯೋಜನೆ ಅನ್ವಯಿಸುತ್ತದೆ. ಪ್ರಸ್ತುತ ರಾಜ್ಯದಲ್ಲಿ 12,670 ಪ್ರಥಮ ದರ್ಜೆ ಗುತ್ತಿಗೆದಾರರು ಹಾಗೂ 2973 ಎರಡನೇ ದರ್ಜೆ ಗುತ್ತಿಗೆದಾರರು ಈಗಾಗಲೇ ನೋಂದಣಿ ಮಾಡಿದ್ದಾರೆ. ಈ ತಂತ್ರಾಂಶವನ್ನು ಬಳಸಿಕೊಂಡು ಗುತ್ತಿಗೆದಾರರು ನೋಂದಣಿ ಮತ್ತು ನವೀಕರಣಕ್ಕಾಗಿ ಕರ್ನಾಟಕ ಲೋಕೋಪಯೋಗಿ ಇಲಾಖೆಯ ವೆಬ್‌ಸೈಟ್ www.kpw.gov.in ನಲ್ಲಿ ಅರ್ಜಿ ಸಲ್ಲಿಸಬಹುದಾಗಿದೆ. ಗುತ್ತಿಗೆದಾರರಿಗೆ ನೋಂದಣಿ ಪಾಸ್ ಪುಸ್ತಕದ ಬದಲಿಗೆ ಸ್ಮಾರ್ಟ್ ಕಾರ್ಡ್‌ಗಳನ್ನು ನೀಡಲು ಸಹ ಕ್ರಮ ಕೈಗೊಳ್ಳಲಾಗಿದ್ದು, ಇದೇ ಸಂದರ್ಭದಲ್ಲಿ ಸಾಂಕೇತಿಕವಾಗಿ ಈ ಸ್ಮಾರ್ಟ್ ಕಾರ್ಡ್‌ಗಳನ್ನು ವಿತರಿಸಲಾಯಿತು.**

**ಬೆಂಗಳೂರು ಮೈಸೂರು ಅಷ್ಟಪಥ ರಸ್ತೆಗೆ ಸಂಬಂಧಿಸಿದಂತೆ ಸರ್ವೇ ಕಾರ್ಯ ಪ್ರಾರಂಭವಾಗಿದ್ದು, ಈ ತಿಂಗಳ ಅಂತ್ಯಕ್ಕೆ ಸರ್ವೇ ಕಾರ್ಯ ಪೂರ್ಣಗೊಳ್ಳಲಿದೆ ಎಂದ ಸಚಿವರು ಬೆಂಗಳೂರು ರಸ್ತೆ ಅಭಿವೃದ್ಧಿಗೆ ಸಂಬಂಧಿಸಿದಂತೆ ಮುಖ್ಯ ಮಂತ್ರಿಗಳು ಸಾವಿರ ಕೋಟಿ ರೂ. ಬಿಡುಗಡೆ ಮಾಡಿದ್ದಾರೆ. ಬೆಂಗಳೂರು ನಗರದ ರಸ್ತೆ ಅಭಿವೃದ್ಧಿಗೆ ಬಳಸಲಾಗುವುದು. ಎಂದು ಸಚಿವರು ತಿಳಿಸಿದರು.**

**ಲೋಕೋಪಯೋಗಿ ಇಲಾಖೆ ಪ್ರಧಾನ ಎಂ.ಆರ್. ಕಾಂಬ್ಳೆ ಅವರು ಉಪಸ್ಥಿತರಿದ್ದರು.**

**ಸಮ/ಕೆಪಿಪಿ/ಕೆಎಂ**